ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೂ ಕೂಡ ಉತ್ತರ ಬಂದಿಲ್ಲ.

ಅಧ್ಯಕ್ಷರು.—ನಿಮ್ಮ ಪ್ರಶ್ನೆಗೂ ಉತ್ತರ ಬಂದಿಲ್ಲವೆಂದರೆ, ದಯವಿಟ್ಟು ನನ್ನ ಕೊಠಡಿಗೆ ಬನ್ನಿ.

ಶ್ರೀ ಎಂ.ಎಸ್. ಕೃಷ್ಣನ್.—ನಾವು ಅನೇಕ ಪ್ರಶ್ನೆಗಳನ್ನು.....

ಅಧ್ಯಕ್ಷರ .—ನಿಮಗೆ ಸಾಕಷ್ಟು ಅವಕಾಶವನ್ನು ಮಾಡಿಕೊಡುತ್ತೇನೆ, ದಯವಿಟ್ಟು ಆಲ್ಲಿ ಬಂದು ನನ್ನನ್ನು ನೋಡಿ. ಫೈಲನ್ನು ತರಿಸಿ ನೋಡಿ ಹೇಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ, ನಾನು ೨೦-೩೦ ಪ್ರಶ್ನೆಗಳನ್ನು ಕೇಳಿದ್ದೇನೆ. ಅದರಲ್ಲಿ ಯಾವುದಂ ಚುಕ್ಕೆ ಗುರ್ತಿನ ಪ್ರಶ್ನೆ, ಯಾವುದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಯನ್ನು ತಾವು ಮಾಡುತ್ತೀರೆಂದು ನಮಗೆ ಗೊತ್ತಾಗುವುದಿಲ್ಲ. ಇನ್ನು ಕೆಲವು ಪ್ರಶ್ನೆಗಳು ಏನಾಗುತ್ತವೆ ಎಂಬುದೂ ಕೂಡ ಗೊತ್ತಾಗುವುದಿಲ್ಲ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದು ವುದಕ್ಕೆ ಎದ್ದು ನಿಂತಿದ್ದೇನೆ. ಪ್ರಜಾವಾಣಿ ಪತ್ರಿಕೆಯಲ್ಲಿ ಇಬ್ಬರು ಮಹಿಳೆಯರನ್ನು ಕೊಲೆಪಾತಕಿಗಳು ಯಾರೋ ಕೊಲೆಮಾಡಿದ್ದಾರೆ. ಆ ಕೊಲೆ ಪಾತಕಿಗಳು ಇನ್ನೂ ಪತ್ತೆ ಆಗಿಲ್ಲ. ಇದರಿಂದಾಗಿ ಆಲ್ಲಿ ಸಂತ್ರಸ್ತರು ಇರತಕ್ಕ ಜನರು ಅದರಲ್ಲೂ ಮಹಿಳೆಯರು ತುಂಬಾ ಭಯಭೀತರಾಗಿದ್ದಾರೆ. ಮಾನ್ಯ ಗೃಹಮಂತ್ರಿಗಳು ಇಲ್ಲೇ ಇದ್ದಾರೆ. ಅವರ ಏನು ಹೇಳುತ್ತಾರೆ ಕೇಳೋಣ. ಈ ವಿಚಾರಕ್ಕೆ ಸಂಬಂಧಿಸಿದಂತೆ ನಿಯಮ ೬೮ರ ಕೆಳಗೆ ತಮಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಅದು ನಾಳೆ ಬರಬಹುದು ಅಥವಾ ಇನ್ನೊಂದು ದಿವಸ ಬರಬಹುದು. ನಿಮಗೆ ಅರ್ಜೆಂಟ್ ಇದ್ದರೆ ನನ್ನ ಚೇಂಬರ್‌ಗೆ ಬಂದು ನೋಡಿ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸ್ವಾಮಿ, ಕೊಲೆಯಾದವರ ತಲೆಯೇ ಪತ್ತೆ ಇಲ್ಲ. ಇದರ ಬಗ್ಗೆ ಹೇಳಿಕೆಯನ್ನು ಕೊಡಲು ಮಾನ್ಯ ಗೃಹಮಂತ್ರಿಗಳಿಗೆ ಅವಕಾಶವನ್ನು ಕೊಡಿ. ಅವರು ಇಲ್ಲೇ ಇದ್ದಾರೆ ಅವರು ಏನು ಹೇಳುತ್ತಾರೆ ತಿಳಿದುಕೊಳ್ಳೋಣ.

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ. ಅನಂತರ ನೋಡೋಣ.

ಗಮನ ಸೆಳೆಯುವ ಸೂಚನೆ

ಬೀದರಿನ ಕೆಲವು ಶಾಲೆಗಳಿಗೆ ಕಳೆದ ನಾಲ್ಕು ವರ್ಷಗಳಿಂದ ಅನುದಾನವನ್ನು ಬಿಡುಗಡೆ ಮಾಡದಿರುವುದರಿಂದ ಸಿಬ್ಬಂದಿ ವರ್ಗದವರಿಗೆ ತೊಂದರೆಯುಂಟಾಗಿರುವ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್).—ಮಾನ್ಯ ಅಧ್ಯಕ್ಷರೇ, ಬೀದರಿನ ಸಿದ್ಧಾರ್ಥ ಪ್ರಾಥಮಿಕ ಶಾಲೆ ಮತ್ತು ಕಿರಿಯ ಮಹಾವಿದ್ಯಾಲಯ ಹಾಗೂ ರಾಯಚೂರಿನ ಆನಂದ ಪ್ರೌಢಶಾಲೆಗಳಿಗೆ ಕಳೆದ ನಾಲ್ಕು ವರ್ಷಗಳಿಂದ ಅನುದಾನವನ್ನು ಬಿಡುಗಡೆ ಮಾಡದಿರುವುದರಿಂದ ಸಿಬ್ಬಂದಿ ವರ್ಗದವರಿಗೆ ತೊಂದರೆ ಉಂಟಾಗಿರುವ ವಿಚಾರದ ಬಗ್ಗೆ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಸಿದ್ಧಾರ್ಥ ಪ್ರಾಥಮಿಕ ಶಾಲೆ ಬೀದರ್.—ಸಿದ್ಧಾರ್ಥ ಕನ್ನಡ ಪ್ರಾಥಮಿಕ ಶಾಲೆ ಬೀದರ್, ಈ

ಶಾಲೆಯನ್ನು ೧೯೮೧-೮೨ ರಿಂದತೆರೆಯಲು ಡಾ॥ ಬಾಬಾಸಾಹೇಬ್‌ಅಂಬೇದ್ಕರ್ ಸ್ಮಾರಕ ಸಮಿತಿಯವರಿಗೆ ಅನುಮತಿಯನ್ನು ಬೀದರ್ ಉಪ-ನಿರ್ದೇಶಕರು ೨೯-೬-೧೯೮೧ರಲ್ಲಿ ನೀಡಿರುತ್ತಾರೆ. ಈ ಶಾಲಾ ಆಡಳಿತ ಮಂಡಳಿಯವರು ಪರಿಶಿಷ್ಟ ಜಾತಿ ವರ್ಗದ ಆಡಳಿತ ಮಂಡಳಿ ಎಂದು ಶಾಲಾ ಪ್ರಾರಂಭದಿಂದಲೆ ಅನುದಾನ ಕೋರಿರುತ್ತಾರೆ. ಆದರೆ ಈ ಶಾಲಾ ಆಡಳಿತ ಮಂಡಳಿಯವರು, ಅನುಮತಿಯನ್ನು ೨೯-೬-೧೯೮೧ರಲ್ಲಿ ನೀಡಿದ್ದರೂ ಅನುದಾನ ಕೋರಿ ದಿನಾಂಕ ೧೬-೧೧-೧೯೮೩ರಲ್ಲಿ ಅಪೂರ್ಣ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆಡಳಿತ ಮಂಡಳಿಯಲ್ಲಿ ೧೧ ಜನ ಸದಸ್ಯರಿದ್ದು, ಗುಲ್ಬರ್ಗದ ವಿಳಾಸ

ಕೊಟ್ಟಿರುತ್ತಾರೆ. ಆದರೆ ತಾವು ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದವರು ಎಂಬ ಬಗ್ಗೆ ಬೆಂಗಳೂರು ದಕ್ಷಿಣ ತಾಲೂಕಿನ ತಹಸೀಲ್ದಾರರ ಮುಂದೆ ದಿನಾಂಕ ೧೮-೩-೧೯೮೩ರಲ್ಲಿ ಪ್ರಮಾಣ ವಚನ ಮಾತ್ರ ಸ್ವೀಕರಿಸಿದ್ದು ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದವರು ಎಂಬ ಬಗ್ಗೆ ಪ್ರಮಾಣ ಪತ್ರಗಳನ್ನು ಪಡೆದು ಸಲ್ಲಿಸಿಲ್ಲ. ೧೯೮೧ ಲಿನೇ ಸಾಲಿನಲ್ಲಿ ೧ನೇ ತರಗತಿಯಲ್ಲಿ ೬೭ ಮಕ್ಕಳಿದ್ದು, ಈ ಪೈಕಿ ೫೧ ಮಕ್ಕಳು ಪರಿಶಿಷ್ಟ ಜಾತಿಗೆ ಸೇರಿದವರು ಎಂದು ತಿಳಿಸಿದ್ದು, ೫೧ ಮಕ್ಕಳು ಪರಿಶಿಷ್ಟ ಜಾತಿಗೆ ಸೇರಿದವರು ಎಂದು ಪ್ರಮಾಣ ಪತ್ರಿಕೆಗಳನ್ನು ದಿನಾಂಕ ೧೬-೧೧-೧೯೮೪ರಲ್ಲಿ ಬೀದರಿನ ಮುನಿಸಿಪಲ್ ಕಮಿಷನರ್‌ರವರಿಂದ ಪಡೆದಂ ಸಲ್ಲಿಸಿರುತ್ತಾರೆ. ಹೀಗೆ ಆಡಳಿತ ಮಂಡಳಿಯವರು ಸಲ್ಲಿಸಿದ್ದ ಅಪೂರ್ಣ ಪ್ರಸ್ತಾವನೆಯನ್ನು ಎಲ್ಲಾ ಮಾಹಿತಿಗಳನ್ನು ಪಡೆದು ಗುಲ್ಬರ್ಗ ಸಹ ನಿರ್ದೇಶಕರು ದಿನಾಂಕ ೨೬-೭-೧೯೮೫ರಲ್ಲಿ ಪ್ರಾಥಮಿಕ ಶಿಕ್ಷಣ ನಿರ್ದೇಶಕರಿಗೆ ಸಲ್ಲಿಸಿರುತ್ತಾರೆ. ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು ಇದರ ಬಗ್ಗೆ ಅತಿ ಜಾಗೃತೆಯಾಗಿ ಆದೇಶ ಹೊರಡಿಸಲಾಗುವುದು.

ಸಿದ್ಧಾರ್ಥ ಕಿರಿಯ ಕಾಲೇಜು ಬೀದರ್.—ಆಯುಕ್ತರಿಂದ ಸದರಿ ಕಾಲೇಜಿಗೆ ಅನುದಾನ ಕೊಡುವ

ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯು ೧೬-೮-೧೯೮೫ರಲ್ಲಿ ಬಂದಿದ್ದು ಈ ಪ್ರಸ್ತಾವನೆಯ ಹಲವು ವಿಷಯಗಳ ಬಗ್ಗೆ ವಿವರಗಳನ್ನು ಕೇಳಲಾಗಿತ್ತು. ಆ ವಿವರಗಳನ್ನು ಆಯುಕ್ತರಿಂದ ಸ್ವೀಕ್ಷಿಸಲಾಗುತ್ತಿದೆ. ಇದು ಬಂದ ಕೂಡಲೇ ಇದನ್ನು ಪರಿಶೀಲಿಸಿ ಆದಷ್ಟು ಜಾಗತ್ರೆ ಆದೇಶವನ್ನು ಹೊರಡಿಸಲಾಗುವುದು.

ಆನಂದ್ ಪ್ರೌಢಶಾಲೆ ರಾಯಚೂರು.—ಡಾಕ್ಟರ್ ಬಾಬು ಅಂಬೇಡ್ಕರ್ ಸ್ಮಾರಕ ಸಮಿತಿ,

ರಾಯಚೂರು, ಈ ಆಡಳಿತ ವರ್ಗವು ಯರಮರಸ್‌ನಲ್ಲಿ ೨೩-೬-೧೯೮೫ ರಂದು ಶಾಲೆಯನ್ನು ತೆರೆದಿದ್ದಾರೆ. ಇದರ ಬಗ್ಗೆ ರಾಯಚೂರಿನ ಉಪ-ನಿರ್ದೇಶಕರನ್ನು ಸಂಪರ್ಕಿಸಲಾಗಿ, ಆಡಳಿತ ವರ್ಗವು ಮುಂಗಡ ಅನುದಾನವನ್ನು ನೀಡುವ ಬಗ್ಗೆ ಯಾವ ಮಾಹಿತಿಯನ್ನು ಕೊಟ್ಟಿಲ್ಲ ಎಂದು ತಿಳಿಸಿದ್ದಾರೆ. ವಿದ್ಯಾರ್ಥಿಗಳು ಪರಿಶಿಷ್ಟ ವರ್ಗ ಪಂಗಡಕ್ಕೆ ಸೇರಿದ ಬಗ್ಗೆ ಯಾವ ಮಾಹಿತಿಗಳನ್ನು ಸಹ ಕೊಟ್ಟಿಲ್ಲ ಎಂಬುದಾಗಿ ತಿಳಿದು ಬಂದಿದೆ. ಅಲ್ಲಿನ ನ್ಯೂನತೆಗಳನ್ನು ಅನುಮೋದಿಸಲು ಪ್ರಸ್ತಾವನೆಗಳನ್ನು ೨೫-೧೧-೧೯೮೫ ರಂದು ಆಡಳಿತ ವರ್ಗದವರು ಉಪ-ನಿರ್ದೇಶಕರಿಗೆ ಕಳುಹಿಸಿರುತ್ತಾರೆ. ಆಡಳಿತ ವರ್ಗವು ಎಲ್ಲಾ ಮಾಹಿತಿಗಳನ್ನು ನೀಡಿದ ನಂತರ, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರೆ, ಇದರ ಹೊರತಾಗಿ ಒಂದೇ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಅಧಿಕಾರಿಗಳನ್ನು ಕರೆದು ಸೂಚನೆಯನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಒಂದು ತಿಂಗಳೊಳಗಾಗಿ ತರಿಸಿಕೊಂಡು ಅಂದರೆ ಬರುವ ಜನೇ ತಾರೀಖಿನ ಒಳಗಾಗಿ ಅದನ್ನು ತರಿಸಿಕೊಂಡು ಸರ್ಕಾರಕ್ಕೆ ಅದನ್ನು ಸಲ್ಲಿಸಬೇಕು. ಎಂದು ತಿಳಿಸಿದ್ದೇನೆ ಅದನ್ನು ಸಲ್ಲಿಸಿದ ತಕ್ಷಣ ಏಳನೇ ತಾರೀಖಿಗೋ ಅಥವಾ ಎಂಟನೇ ತಾರೀಖಿನ ಒಳಗೆ ಮೂರು ಸಂಸ್ಥೆಗಳಿಗೆ ಅನುದಾನವನ್ನು ನೀಡುವುದಕ್ಕೆ ಏರ್ಪಾಡು ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಸಚಿವರು ಇದರ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ, ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಆದರೆ ಯಾವ ರೀತಿ ತೊಂದರೆ ಇದೆ, ಅದನ್ನು ನೋಡಬೇಕು. ೧೯೮೧-೮೫ರಲ್ಲಿ ಪ್ರಾರಂಭ ಆದಂತಹ ಪ್ರೌಢಶಾಲೆ ಸ್ಕೂಲ್‌ಗಳು ಮತ್ತು ಜೂನಿಯರ್ ಕಾಲೇಜು, ಹೈಸ್ಕೂಲ್‌ಗಳಿಗೆ ಸುಮಾರು ಐದು ವರ್ಷದಿಂದ ಗ್ರಾಂಟ್ಸ್ ಇಲ್ಲದೆ, ಅದರಲ್ಲೂ ಅನುಸೂಚಿತ ಜಾತಿಗೆ ಸೇರಿದವರಾಗಿ ಇದನ್ನು ಯಾವ ರೀತಿ ಸಹಿಸಬೇಕು ? ಎರಡನೆಯದಾಗಿ ಅನೇಕ ಶಿಕ್ಷಕರು ಸಂಬಳ ಇಲ್ಲದೇ ದುಡಿಯತಕ್ಕಂಥ ಪರಿಸ್ಥಿತಿ ಇನೆ, ಅವರು ಇದರ ಬಗ್ಗೆ ಕಂಪ್ಲೇಂಟ್ ಮಾಡುತ್ತಿದ್ದಾರೆ. ಮೂರನೆಯದು, ಬೆಂಗಳೂರಿನಲ್ಲಿ ಕ್ಯಾಷ್ಟ್ ಸರ್ಟಿಫಿಕೇಟ್ ಪಡೆದಿದ್ದಾರೆಂದು ಹೇಳಿ ಈ ರೀತಿ ಮಾಡಿದ್ದಾರೆ. ಇದರ ಬಗ್ಗೆ ನಾನಾದರೂ ಹೇಳುತ್ತೇನೆ. ಇಡೀ ರಾಜ್ಯದಲ್ಲಿ ಈ ಜಾತಿ ಸರ್ಟಿಫಿಕೇಟನ್ನು ಎಲ್ಲಿಂದ ಬೇಕಾದರೂ ತರಲಿ, ಅದು ಇದಕ್ಕೆ ಸಂಬಂಧಪಡುವುದಿಲ್ಲ. ಐದು ವರ್ಷಗಳು ಆದರೂ ಕೂಡ ಇವತ್ತಿನ ದಿನಸ ಪ್ರತಿಯೊಂದು ಹಂತದಲ್ಲಿಯೂ ಎ.ಇ.ಓ. ಹಂತದಲ್ಲಿ ಎರಡು ವರ್ಷ, ಡಿಡಿಪಿಐ ನಲ್ಲಿ ಮೂರು ವರ್ಷ, ಸೆಕ್ರೆಟೇರಿಯೇಟ್‌ನಲ್ಲಿ ಮೂರು ನಾಲ್ಕು ತಿಂಗಳು ಹೀಗೆ ತಡವಾಗುತ್ತಿದೆ. ನಾನು ಒಬ್ಬ ಸದಸ್ಯನಾಗಿ ಈ ವಿಷಯವನ್ನು ತಮ್ಮ ನಜರಿಗೆ ತಂದಿದ್ದೇನೆ. ಅದೇ ರೀತಿಯಲ್ಲಿ ಅನೇಕ ಶಾಲೆಗಳಲ್ಲಿ ಹರಿಜನ ಗಿರಿಜನರು ಏನು ಇದ್ದಾರೆ, ಅವರ ಬಗ್ಗೆ ಒಂದು ನಿರ್ದಿಷ್ಟವಾದಂತಹ ಕಾರ್ಯ

ಕ್ರಮವನ್ನು ಸರ್ಕಾರದವರು ಹಾಕಿಕೊಳ್ಳಬೇಕು. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಖುದ್ದಾಗಿ ಹೋಗಿ ಇನ್ಸ್‌ಪೆಕ್ಷನ್ ಮಾಡಬೇಕು. ವಿದ್ಯಾರ್ಥಿಗಳು ಎಷ್ಟು ಇದ್ದಾರೆ, ಯಾವ ಜಾತಿಗೆ ಸೇರಿದ್ದಾನೆ ಎನ್ನುವುದನ್ನೆಲ್ಲಾ ಸಂಬಂಧಪಟ್ಟ ಡಿ.ಡಿ.ಪಿ.ಐ. ಗಳೋ ಅಥವಾ ಎ.ಇ.ಓ. ಗಳೋ ನೋಡಬೇಕು. ಸಂಬಂಧಪಟ್ಟ ಅಧಿಕಾರಿಗಳು ನಾಲ್ಕು ವರ್ಷಗಳಿಂದ ಏನು ಮಾಡಿದರು ? ಇವತ್ತು ಸರ್ಟಿಫಿಕೇಟ್ ಏನು ಕೊಟ್ಟಿದ್ದಾರೆ, ಅದನ್ನು ಯಾವ ಯಾವ ಜಾತಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಎಂದು ಕೊಟ್ಟಿದ್ದಾರೆ ಅಂಥ ವಿವರಗಳ ಪಟ್ಟಿ ಬೇಕಾಗಿದೆ. ಇವರ ಅಧಿಕಾರಿಗಳು, ಇವರ ಇನ್ಸ್‌ಪೆಕ್ಟರ್‌ಗಳು ಇವರ ಎ.ಇ.ಓ. ಮತ್ತು ಡಿ.ಡಿ.ಪಿ.ಐ. ಗಳು ನಾಲ್ಕು ವರ್ಷದಿಂದ ಏನು ಮಾಡಿದರು ? ಈ ರೀತಿ ಮಾಡುವುದರ ಬದಲಾಗಿ ಶಾಲೆಗಳನ್ನು ಮುಚ್ಚಬೇಕಾಗಿತ್ತು. ಇಲ್ಲದಿದ್ದರೆ ಅಲ್ಲಿ ಇನ್ಸ್‌ಪೆಕ್ಟ್ ಮಾಡಿ ಆ ವಿದ್ಯಾರ್ಥಿಗಳಿಗೆ ಅಲ್ಲಿ ಗ್ರ್ಯಾಂಟನ್ನು ರಿಲೀಸ್ ಮಾಡಬೇಕಾಗಿತ್ತು. ಐದು ವರ್ಷ ಏನು ತೊಂದರೆ ಆಯಿತು ; ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಆಗ ಇಪರದೇ ಸರ್ಕಾರ ಇತ್ತು, ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಅಧಿಕಾರಕ್ಕೆ ಬಂದಮೇಲೆ ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ ಡಿಸೆಂಬರ್ ೩೧ನೇ ತಾರೀಖಿನ ಒಳಗೆ ಯಾರು ಎ.ಇ.ಓ.ಗಳು ರಿಪೋರ್ಟ್‌ನ್ನು ಕಳುಹಿಸುವುದಿಲ್ಲವೋ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಒಂದು ನಿರ್ಣಯವನ್ನು ಮಾಡಿದ್ದೇವೆ. ಅದರ ಪ್ರಕಾರವೇ ಸರ್ಕಾರವು ಒಂದು ಆಜ್ಞೆಯನ್ನು ಹೊರಡಿಸಿದೆ. ಎ.ಇ.ಓ ರವರಿಂದ ವರದಿ ಬಂದಮೇಲೆ ವಾರ್ಷಿಕ ೩೧ರ ಒಳಗೆ ಯಾರಿಗೆ ಅನುದಾನ ಕೊಡಬೇಕಾಗಿರುತ್ತದೆ, ಅಂತಹವರಿಗೆ ಅನುದಾನವನ್ನು ಕೊಡುತ್ತೇವೆ. ಸರ್ಕಾರಿ ಆಜ್ಞೆ ಬಂದ ಮೇಲೂ ಯಾರು ಈ ವರ್ಷದಿಂದ ಅದಕ್ಕನುಗುಣವಾಗಿ ಕೆಲಸ ಮಾಡುವುದಿಲ್ಲವೋ ಅಂಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಇಷ್ಟು ದಿವಸ ಏನು ತೊಂದರೆ ನಡೆದುಕೊಂಡು ಬಂದಿದೆ, ಆ ನ್ಯೂನತೆಯನ್ನು ಸರಿಪಡಿಸಬೇಕು ಎನ್ನುವ ದೃಷ್ಟಿಯಿಂದ ಈ ಆಜ್ಞೆಯನ್ನು ಈ ಸಾಲಿನಲ್ಲಿ ಹೊರಡಿಸಿದ್ದೇವೆ. ಈ ಆಜ್ಞೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತಿದ್ದೇವೆ. ಇನ್ನು ಮುಂದೆ ಯಾವುದೇ ಸಂಸ್ಥೆಗಳಾದರೂ ಆಗಿರಲಿ ಆ ಸಂಸ್ಥೆಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ ಎಂದು ತಿಳಿಸುತ್ತೇನೆ. ಇಷ್ಟು ದಿವಸ ಏನು ತೊಂದರೆ ಆಗಿದೆ, ಅದರ ಬಗ್ಗೆ ಅಧಿಕಾರಿಗಳು ಏನು ಕ್ರಮ ತೆಗೆದುಕೊಂಡಿಲ್ಲ, ಇದಕ್ಕೆ ಸಂಬಂಧಪಟ್ಟ ಎಲ್ಲಾ ಮಾಹಿತಿಯನ್ನು ತರಿಸಿಕೊಂಡು ತಪ್ಪಿತಸ್ಥರು ಯಾರಿದ್ದಾರೆ, ಅಂಥವರಿಗೆ ಮುಂದೆ ಹೀಗಾಗದಂತೆ ನೋಡಿಕೊಳ್ಳಬೇಕೆಂದು ಸೂಚನೆ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಇದಕ್ಕೆ ಸಂಬಂಧಪಟ್ಟ ಕೆಲವು ಜನ ತಪ್ಪಿತಸ್ಥರು ಇದ್ದಾರೆ ಅದರ ಬಗ್ಗೆ ನಾನು ಈಗಾಗಲೇ ಪತ್ರದ ಮುಖಾಂತರ ಮಂತ್ರಿಗಳಿಗೆ ಬರೆದಿದ್ದೇನೆ. ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೂ ಸಹ ಬರೆದಿದ್ದೇನೆ. ಆದರೂ ಕೂಡ ಅವರ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಅವರು ಏನು ಮಾಡುತ್ತಾರೆಂದರೆ ಕಳುಹಿಸಿರಬಹುದಾದ ಪತ್ರಗಳನ್ನು ತೆಗೆದು ಅದು ಇನ್‌ಕಂಪ್ಲೀಟ್ ಆಗಿದೆಯೆಂದು, ಜಾತಿ ಸರ್ಟಿಫಿಕೇಟ್ ತೆಗೆದುಹಾಕಿ, ಜಿಜಿಸ್ಟರ್ ಸರ್ಟಿಫಿಕೇಟ್ ತೆಗೆದುಹಾಕಿ, ಆಡಿಟ್ ರಿಪೋರ್ಟನ್ನು ತೆಗೆದುಹಾಕಿ ಅಥವಾ ಬೇರೆ ಯಾವುದಾದರೂ ಒಂದನ್ನು ತೆಗದುಹಾಕಿ ಬ್ಯಾಂಕ್ ರೆಫರೆನ್ಸ್ ಮಾಡುತ್ತಾರೆ. ಆದ್ದರಿಂದ ಇಂಥ ಯಾವುದೇ ಕೇಸ್‌ಗಳು ಇರಲಿ, ಖುದ್ದಾಗಿ ರಿವ್ಯೂ ಮಾಡಿದರೆ ಆಗ ನಿಮಗೆ ಗೊತ್ತಾಗುತ್ತದೆ. ಇಲ್ಲದೇ ಹೋದರೆ ಶಾಲೆಗಳನ್ನು ನಡೆಸತಕ್ಕಂಥವರಿಗೆ ಕೆಟ್ಟ ಹೆಸರು ಬರುತ್ತದೆ, ಕಂಪ್ಲೆಂಟ್ ಕೊಟ್ಟರೂ ಸಹ ತಾವು ಕ್ರಮ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ತಾವುಗಳು ದಯವಿಟ್ಟು ಇಂಥದ್ದಕ್ಕೆಲ್ಲಾ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸೂಚನೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಸದನ ಮುಂಗಿದ ಮೇಲೆ ನಾನು ಒಂದು ದಿವಸ ಎಲ್ಲಾ ಕಡತಗಳನ್ನು ತರಿಸಿಕೊಂಡು ರಿವ್ಯೂ ಮಾಡುತ್ತೇನೆ. ರಿವ್ಯೂ ಮಾಡಿದ ಮೇಲೆ ಯಾವ ಯಾವ ಸಂಸ್ಥೆಗಳಿಗೆ ಅನ್ಯಾಯವಾಗಿದೆ, ಅದನ್ನು ಸರಿ ಮಾಡುತ್ತೇನೆ. ನನ್ನ ಛೇಂಬರ್‌ನಲ್ಲಿಯೇ ಇವೆಲ್ಲವನ್ನೂ ರಿವ್ಯೂ ಮಾಡುತ್ತೇನೆ.